**ದಿನಾಂಕಃ 08/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ವಾದಿ ಪರ ವಕೀಲರು ಇಲ್ಲವೆಂದು ತಿಳಿಸಿರುತ್ತಾರೆ**

**ಪಾಟೀ ಸವಾಲು: 1 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ ಬಿ ಜಿ ಎಸ್ ವಕೀಲರಿಂದ**

1. ಈ ದಾವೆಯನ್ನು ನಾವು ಜಮೀನು ಬೇಕು ಎಂದು ಹೂಡಿದ್ದೇವೆ. ವಾದಿ ಜಮೀನು ಬೇಕು ಎಂದು ದಾವೆ ಹೂಡಿದ್ದಾರೆ. ಯಾವ ಸರ್ವೆ ನಂಬರು ಜಮೀನುಗಳಿಗೆ ದಾವೆ ಹೂಡಿದ್ದಾರೆ ಎಂದು ಗೊತ್ತಿಲ್ಲ. ದಾವಾ ಸ್ವತ್ತುಗಳನ್ನು ನಾನು ನೋಡಿಲ್ಲ. ದಾವಾ ಸ್ವತ್ತುಗಳ ಚಕ್ಕುಬಂದಿ ಗೊತ್ತು. ಯಾವ ಸರ್ವೆ ನಂಬರಿಗೆ ಯಾವ ಚಕ್ಕುಬಂದಿ ತೋರಿಸಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.1 ರ ವಿಸ್ತೀರ್ಣ ಮತ್ತು ಚಕ್ಕುಬಂದಿ ಗೊತ್ತಿಲ್ಲ.

2. ನನ್ನನ್ನು ಹೊಳೆ ನರಸೀಪುರಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ನನ್ನ ಮದುವೆ ಆಗಿ 65 ವರುಷ ಆಗಿದೆ. ನಾನು ನನ್ನ ಮಗಳನ್ನು ನಿಲವಾಡಿ ಗ್ರಾಮದ ಶ್ರೀನಿವಾಸ ಎಂಬ ಹುಡುಗನಿಗೆ ಮದುವೆ ಮಾಡಿಕೊಟ್ಟಿದ್ದೇನೆ. ಶ್ರೀನಿವಾಸ ರವರ ತಂದೆಯ ಹೆಸರು ಗೊತ್ತಿಲ್ಲ. ನನ್ನ ತಂದೆಯ ಹೆಸರು ಸಣ್ಣಪ್ಪ ನಾಯಕ. ಸಣ್ಣಪ್ಪ ನಾಯಕ ರವರ ತಂದೆಯ ಹೆಸರು ಕಾಡು ನಾಯಕ. ಕಾಡು ನಾಯಕ ರವರಿಗೆ ಇಬ್ಬರು ಮಕ್ಕಳು. ಅಂದರೆ ಮಲ್ಲ ನಾಯಕ ಮತ್ತು ಸಣ್ಣಪ್ಪನಾಯಕ. ಮಲ್ಲ ನಾಯಕ ರವರಿಗೆ ಇಬ್ಬರು ಗಂಡು ಮಕ್ಕಳು, 5 ಜನ ಹೆಣ್ಣು ಮಕ್ಕಳು. ಮಲ್ಲ ನಾಯಕ ರವರ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಮಲ್ಲನಾಯಕ ರವರ ಮಕ್ಕಳ ಹೆಸರು ಮಲ್ಲಪ್ಪ ಮತ್ತು ಇನ್ನೊಬ್ಬರ ಹೆಸರು ತಮ್ಮಣ್ಣ ಎಂದು ಕರೆಯುತ್ತಿದ್ದರು. ಅವರ ಹೆಣ್ಣು ಮಕ್ಕಳ ಹೆಸರು ಸುಂದರಿ, ಯಶೋಧ, ಕಾವೇರಮ್ಮ, ನಿಂಗಮ್ಮ ಮತ್ತು ಇನ್ನೊಬ್ಬರ ಹೆಸರು ಮರೆತಿದ್ದೇನೆ.

3. ಸಣ್ಣಪ್ಪನಾಯರಿಗೆ 5 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ಆ 5 ಜನ ಹೆಣ್ಣು ಮಕ್ಕಳಲ್ಲಿ ನಾನು ಒಬ್ಬಳು. ಕಾಡು ನಾಯಕ ನನ್ನ ತಾತ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಕಾಡುನಾಯಕ ರವರಿಗೆ ಮಲ್ಲನಾಯಕ ಮತ್ತು ಸಣ್ಣಪ್ಪ ನಾಯಕ ಎಂಬ

ಮಕ್ಕಳು ಇದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಾನು ಸಣ್ಣಪ್ಪ ನಾಯಕರ ಮಗಳು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆ ರೀತಿ ದಾಖಲೆ ಕೊಡಲು ತೊಂದರೆ ಇರಲಿಲ್ಲ.

4. ವಾದಿ ನನ್ನ ಅಣ್ಣ. ಈಗಲೂ ನಿಲವಾಡಿ ಗ್ರಾಮದಲ್ಲಿ ಇದ್ದಾರೆ. ವಾದಿಯವರು ಅವರ ಯಾವ ವಿಳಾಸ ನೀಡಿ ದಾವೆ ಹೂಡಿದ್ದಾರೆಂದು ಗೊತ್ತಿಲ್ಲ. ತೆಲಗಿನಕುಪ್ಪೆ ಗ್ರಾಮದಲ್ಲಿ ವಾದಿಗೆ ಸೇರಿದ ಮನೆ ಮತ್ತು ಜಮೀನು ಇದೆ. ತೆಲಗಿನಕುಪ್ಪೆ ಗ್ರಾಮದ ಆಸ್ತಿ ನನ್ನ ತಾಯಿಯಿಂದ ವಾದಿಗೆ ಬಂದಿರುತ್ತದೆ. ನನ್ನ ತಾಯಿಯಿಂದ ವಾದಿಗೆ ಬಂದಿದೆ ಎಂದು ದಾಖಲೆ ಹಾಜರುಪಡಿಸಿಲ್ಲ. ತೆಲಗಿನಕುಪ್ಪೆ ಗ್ರಾಮದ ಸ್ವತ್ತುಗಳನ್ನು ಸೇರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ.

5. ನಿಂಗಪ್ಪನಾಯಕ, ಮಲ್ಲನಾಯಕ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. 20-25 ವರುಷಗಳ ಹಿಂದೆ ನನ್ನ ತಂದೆ ತೆಲಗಿನಕುಪ್ಪೆ ಗ್ರಾಮದಲ್ಲಿ ತೀರಿಕೊಂಡರು. ಸಣ್ಣಪ್ಪನಾಯಕ ಸಹ ನಮ್ಮ ಊರಿನಲ್ಲಿಯೇ ಇದ್ದರು. ವಾದಿ ಮತ್ತು ನನ್ನ ತಂದೆ ತೆಲಗಿನಕುಪ್ಪೆ ಗ್ರಾಮದಲ್ಲೇ ಮತದಾನ ಮಾಡುತ್ತಿದ್ದರು ಎಂದರೆ ಸರಿ. ಅವರು ನಿಲವಾಡಿ ಗ್ರಾಮದಲ್ಲಿ ಮತದಾನ ಮಾಡಿಲ್ಲ ಎಂದರೆ ಸರಿ. ಸಣ್ಣಪ್ಪ ನಾಯಕ ಮತ್ತು ವಾದಿ ಸುಮಾರು 70-75 ವರುಷಗಳಿಂದಲೂ ತೆಲಗಿನಕುಪ್ಪೆ ಗ್ರಾಮದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ವಾದಿ ತೆಲಗಿನಕುಪ್ಪೆ ಗ್ರಾಮದಲ್ಲೇ ಪಡಿತರ ಚೀಟಿ ಹೊಂದಿ ದಿನಸಿ ಪಡೆಯುತ್ತಿದ್ದಾರೆ ಎಂದರೆ ಸರಿ.

6. ಮೃತ ನಿಂಗಪ್ಪನಾಯಕ ಮತ್ತು ಎಂ ಮಲ್ಲಪ್ಪ ರವರ ಮನೆಯ ವ್ಯವಹಾರಗಳು ಗೊತ್ತಿಲ್ಲ. ಮೃತ ನಿಂಗಪ್ಪನಾಯಕ ಮತ್ತು ಎಂ ಮಲ್ಲಪ್ಪ ರವರು ಆಸ್ತಿಗಳನ್ನು ಭಾಗ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಯಾರ ಹೆಸರಿನಲ್ಲಿದೆ ಇದೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ, ಮೃತ ನಿಂಗಪ್ಪನಾಯಕ ಮತ್ತು ಎಂ ಮಲ್ಲಪ್ಪ ರವರ ವಂಶದವರು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿಲ್ಲ. ನಾನು ಕಾಡುನಾಯಕ ರವರ ಮೊಮ್ಮಗಳು ಎಂದು ತೋರಿಸಲು ದಾಖಲೆ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ

ವಿಚಾರ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತುನ ಜಂಟಿ ಸ್ವಾಧೀನದಲ್ಲಿ ಇಲ್ಲ ಮತ್ತು ದಾಖಲೆ ಹಾಜರುಪಡಿಸಿಲ್ಲ. ನಮಗೂ ಮತ್ತು ಕಾಡುನಾಯಕರವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಅನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**